# SUDHA

ILLUSTRATED PROGRESSIVE KANNADA WEEKLY

~~MANAGING EDITOR:~~

EDITOR:
E. R. SETHURAM

PROPRIETORS:
THE PRINTERS (MYSORE) PRIVATE LIMITED



TELEPHONE: 53291 (10 lines)
TELEGRAMS: 'SUMA'
16, MAHATMA GANDHI ROAD, BANGALORE-1


April 28, 1976

My dear Sir—

I trust this finds you and Madame in excellent health and spirits. I hope you are enjoying the annual truancy.

In the latest issue of <u>Sudha</u> weekly I have carried a feature about the Children's Painting Competitions: as a special centre-page illustrated article. I am enclosing a copy of the feature for your perusal. Also enclosed is an English rendering of the article.

I shall have a few copies sent to 9 Edward Road for record.

With my warmest regards and best wishes to both of you,

Sincerely yours,

S. R. Ramaswamy

Dr. Svetoslav Roerich
Camp: Naggar, Kulu

SUDHA Kannada weekly: Centre-spread feature, 2 May 1976

2

NICHOLAS ROERICH MEMORIAL

CHILDREN'S PAINTING COMPETITIONS

Interest in art and perception of beauty do not depend on age; these will be dormant in hundreds of children, waiting to express themselves if given an opportunity and impetus. This was effectively demonstrated at the children's painting competitions held in Lalbagh, Bangalore, on 22 February 1976. The competitions had been organised by the Karnataka Chitrakala Parishat in commemoration of the birth centenary of Professor Nicholas Roerich, painter of world renown, champion of international peace and a great lover of India. It was thrilling to witness over 2,250 children participating in the competitions. Children of many ages between three and sixteen were busy producing colourful visual representations of the beauty their inner eye perceived; and it is no wonder the sight of this vast multitude of young painters gladdened the hearts of all who had gathered. The children themselves numbered over two thousand, and, added to the parents and relations of children and other interested onlookers who had thronged the lawns, it was a sea of humanity. It proved to be a singularly memorable day for the children, their elders, and also to the organisers.

Kumari Anuradha Ghorpade inaugurated the competitions at a brief session presided over by Smt. Vasundharadevi Ghorpade. Dr. Svetoslav Roerich emphasized the need to nourish the artistic talent in children while they are still young and impressionable. He also gave a brief account of the life and work of Professor Nicholas Roerich. 120 silver prize-cups donated by Dr. Svetoslav Roerich in his father's memory, and a trophy of the value of Rs. 2,750 donated by Sri H. K. Kejriwal, were accepted for distribution by Smt. K. S. Nagaratnamma on behalf of the Chitrakala Parishat. In addition to 225 prizes to children of various age-groups, six special prizes were also awarded. The prizes were given away to the winners by Sri G. V. K. Rao, Chief Secretary to the Government of Karnataka, at a function held at the West End Hotel on 27 February 1976. The prize-winning paintings were exhibited at the West End Hotel.


The introductory remarks made by Smt. Vasundharadevi Ghorpade may be said to echo the reaction of the thousands of people who witnessed this unique painting fair: "All the children participating in this competition will not become artists. But they will bring a touch of creativeness to whichever field they choose to adopt when they grow up. Science, technology, and management require creativity and ingenuity, no less than the arts."

--)(--


Text of the article is by S. R. RAMASWAMY, Sub-editor, 'Sudha'.

Photographs (eight) accompanying the feature are by B. KESAR SINGH and CHITRAKAR STUDIO, Bangalore:

1. The Universe of Painting: Young painters at work
2. 'Pastime': A prize-winning painting
3. 'My View of a Circus': Prize-winning painting
4. 'A Romp through the Woods': Prize-winning painting
5. A young artist receiving the prize
6. A section of the gathering at the Award Function
7. Dr. Svetoslav Roerich speaking at the Award Function. (Others in the photograph are: Sri Lakshman Manchigiah, Sri H. K. Kejriwal, and Sri G. V. K. Rao)
8. A section of children at the painting competition


ಸುಧಾ
2 ಮೇ 1976
ರೂ.1

# ಸೊಳ್ಳೆಗಳ ಕಾಟವನ್ನು ಸಹಿಸುವುದಕ್ಕಾಗುವುದಿಲ್ಲ





ಎಲ್ಲಕ್ಕಿಂತ ಹೆಚ್ಚು ಮಾರಾಟವಾಗುವ ಸೊಳ್ಳೆ ನಿರೋಧಕ

## ನಿಮಗೆ ಬೇಕು

# ಒಡೋಮಸ್




ಲಕ್ಷೋಪಲಕ್ಷ ಜನರು ನಂಬುವ ಮತ್ತು ಉಪಯೋಗಿಸುವ ತಯಾರಿಕೆ • ಮಕ್ಕಳಿಗೆ ಕೂಡ ಅತ್ಯಂತ ನಿರಪಾಯವಾದುದು.

**ಬಲ್ಸಾರಾ**
ಸುಖಮಯ ಜೀವನಕ್ಕೆ
ಆಧುನಿಕ ಸಾಧನಗಳು


BALSARA ಬಲ್ಸಾರಾ ಅಂಡ್ ಕಂಪೆನಿ (ಪ್ರೈ.) ಲಿ.
43, ನಾಗಿನ್‌ದಾಸ್ ಮಾಸ್ಟರ್ ರೋಡ್, ಬೊಂಬಾಯಿ 400 001.

CHAITRA BLS 45 KAN

# ಜಲವರ್ಣ ಚಿತ್ರಗಳಲ್ಲಿ ಶ್ಲಾಘ್ಯ ಸಾಧನೆ

ಸೌಂದರ್ಯದೃಷ್ಟಿಯುಳ್ಳವರಿಗೆ ಪ್ರಕೃತಿ ಒಂದು ಮಹಾದ್ಭುತ. ನಮ್ಮನ್ನು ಸುತ್ತುವರಿದ ನಿಸರ್ಗದಲ್ಲಿ ಅವರು ನವರಸಗಳನ್ನೂ ಕಾಣುತ್ತಾರೆ: ನದಿಯ ತಿಳಿಹರಿವಿನಲ್ಲಿ ಶಾಂತಿಯನ್ನೂ ಜಲಪಾತದ ಭೋರ್ಗರೆತದಲ್ಲಿ ರೌದ್ರವನೂ ಕಂಡು ನಲಿಯುತ್ತಾರೆ: ಹೂಬಳ್ಳಿಗಳಲ್ಲಿ ಶೃಂಗಾರಲಾಸ್ಯವನ್ನು ಮುಗಿಲನ್ನಡರುವ ಕೋಡುಗಲ್ಲುಗಳಲ್ಲಿ ಬೀಭತ್ಸವನ್ನೂ ಗುರುತಿಸುತ್ತಾರೆ. ಎಮರ್ಸನ್ ಕವಿ ತನ್ನ ಪ್ರಸಿದ್ಧ ಕವನವೊಂದರಲ್ಲಿ ಹೀಗಂದಿದ್ದಾನೆ:

Cities of Mortals Woe-begone
Fantastic Care derides
But in the seri·ous landscape' lone
Stern benefit abides.



'ಶರತ್ಕಾಲ': ಶ್ರೀಮತಿ ವಾಸಂತಿ ವೆಂಕಟೇಶ್ ಅವರ ವರ್ಣಚಿತ್ರ



ದಾಮೋದರ ಕಣಿವೆಯ ಒಂದು ರಮ್ಯವೀಕ್ಷೆ

"ಜನನಿಬಿಡ ನಗರಗಳು ನೂರೆಂಟು ಚಿಂತೆಗಳಿಂದ ತುಂಬಿ ಗೋಳುಸುರಿಯುತ್ತವೆ. ನೆಮ್ಮದಿಯೂ ಉಲ್ಲಾಸವೂ ಬೇಕೆನ್ನುವವರು ಪ್ರಕೃತಿರಮ್ಯತೆಯನ್ನೇ ಮರೆಹೊಗಬೇಕು."

ಇಂಥ ಸಹಜ ಸೌಂದರ್ಯಾವೇಶದಿಂದ ವರ್ಣಚಿತ್ರಕಲೆಯ ಹವ್ಯಾಸವನ್ನು ರೂಢಿಸಿಕೊಂಡಿರುವವರು, ಬೆಂಗಳೂರಿನ ಶ್ರೀಮತಿ ವಾಸಂತಿ ವೆಂಕಟೇಶ್. ಇತ್ತೀಚೆಗೆ ಬೆಂಗಳೂರಿನ ವೆಂಕಟಪ್ಪ ಕಲಾಗಾರದಲ್ಲಿ ಏರ್ಪಟ್ಟಿದ್ದ ವಾಸಂತಿಯವರ ಚಿತ್ರಕಲಾ ಪ್ರದರ್ಶನದಲ್ಲಿ ಅಧಿಕ ಸಂಖ್ಯೆಯವು ನಿಸರ್ಗಚಿತ್ರಗಳು. ಜಲವರ್ಣ, ತೈಲವರ್ಣ – ಎರಡೂ ಪ್ರಕಾರದ 35 ಚಿತ್ರಗಳು ಪ್ರದರ್ಶಿತವಾಗಿದ್ದವು. ಅವುಗಳಲ್ಲಿ 'ಜಿಪ್ಸಿ,' 'ಗುಲ್ ಮೊಹರ್,' 'ಕೂಲಿ,' ಚಿಂತನೆಯನ್ನು ಧ್ವನಿಸುವ ನಾಲ್ಕೈದು ಚಿತ್ರಗಳನ್ನು ಬಿಟ್ಟರೆ ಎಲ್ಲವೂ ಭೂ ಪ್ರಸರಗಳ, ನದಿ ಬೆಟ್ಟ ಕಾಡುಗಳ ವಿಭ್ರಮ ವಿಲಾಸಗಳು. ಉದಯಪುರ, ನಾಸಿಕ್, ದಾಮೋದರ ಕಣಿವೆ, ಕಾಶ್ಮೀರ, ಕೇರಳಮುಂತಾದ ವಿವಿಧಭಾಗಗಳಲ್ಲಿ ತಮಗೆ ಗೋಚರಿಸಿದ ಪ್ರಕೃತಿಸೌಂದರ್ಯವನ್ನು ವಾಸಂತಿಯವರು ಆಕರ್ಷಕವಾಗಿ, ಸಮರ್ಥವಾಗಿ ದಾಖಲೆ ಮಾಡಿದ್ದಾರೆ. ಜವುಗುನೆಲ (Marshlands), ಸೂರ್ಯಾಸ್ತ (Sunset Glory), ವಿಹಾರದಾಣ (Picnic Spot), ಪುಷ್ಕರಿಣಿ (Temple Tank), ಬೆಟ್ಟದ ದಾರಿ (Mountain Path), ಶರತ್ಕಾಲ (Autumn Gilt) ಮುಂತಾದವು ಉಚಿತ ವರ್ಣವಿನ್ಯಾಸ, ಸಪ್ರಮಾಣ ರಚನೆಗಳಿಂದಾಗಿ ಛಾಯಾಚಿತ್ರಗಳೆಂಬ ಭ್ರಮೆಯುಂಟಾಗುವಷ್ಟು ಸಹಜವಾಗಿ ಮೂಡಿವೆ.

ವಾಸಂತಿಯವರು ಯಾವ ಕಲಾಶಾಲೆಯ ಶಿಕ್ಷಣವನ್ನೂ ಪಡೆದವರಲ್ಲ; ಸ್ವಂತ ಕೃಷಿಯಿಂದ ಉತ್ತಮ ಕುಂಚಗಾರಿಕೆಯನ್ನು ಸಾಧಿಸಿಕೊಂಡಿರುವವರು. ವೃತ್ತಿಯಿಂದ ನ್ಯಾಯಮೂರ್ತಿಗಳಾಗಿದ್ದ ಅವರ ತಂದೆ ನರಸಿಂಹಯ್ಯನವರು ಚಿತ್ರಕಲೆಯನ್ನು ಹವ್ಯಾಸವಾಗಿರಿಸಿಕೊಂಡಿದ್ದವರು. ತಂದೆಯಿಂದ ಸ್ಫೂರ್ತಿಯನ್ನೂ ಇದೀಗ ಕಿರ್ಲೋಸ್ಕರ್ ಸಂಸ್ಥೆಯಲ್ಲಿ ಉನ್ನತಾಧಿಕಾರದಲ್ಲಿರುವ ಪತಿ ಕರ್ನಲ್ ಎಸ್. ಎಂ. ಎಚ್. ವೆಂಕಟೇಶ್ ಅವರಿಂದ ಪ್ರೋತ್ಸಾಹವನ್ನೂ ಪಡೆದ ವಾಸಂತಿಯವರು ವರ್ಣಚಿತ್ರಕಲೆಯಲ್ಲಿ ಚಿಕ್ಕಂದಿನಿಂದ ಪರಿಶ್ರಮ ಮಾಡಿದ್ದಾರೆ. ಭಾರತಾದ್ಯಂತ ಸಂಚರಿಸಿರುವ ವಾಸಂತಿಯವರು ಚಿತ್ರಕಲೆ ಮಾತ್ರವಲ್ಲದೆ ಪುಷ್ಪಯೋಜನೆಯಲ್ಲೂ (ಫ್ಲವರ್ ಆರೇಂಜ್‌ಮೆಂಟ್) ವಿಷ್ಣಾತರು; ಈ ಕಲೆಯನ್ನು ಕುರಿತು ಬಡೌದ ಮುಂತಾದೆಡೆ ಹಲವು ಬಾರಿ ಉಪನ್ಯಾಸಗಳನ್ನು ಮಾಡಿದ್ದಾರೆ.

ಯಾವುದೇ ವಿಶಿಷ್ಟ ಕಲಾಸಂಪ್ರದಾಯಕ್ಕೂ ಬದ್ಧರಲ್ಲದ ವಾಸಂತಿಯವರ ಕೃತಿಗಳಲ್ಲಿ ಶೈಲಿಯ ವಿಭಿನ್ನತೆಯಿರುವುದು ಸ್ವಾಭಾವಿಕ. ಸಾಂಪ್ರದಾಯಿಕ ಪ್ರಸ್ಥಾನಗಳಂತೆ ಸಾಂಪ್ರತಕಾಲದ ಕಲಾಮಾರ್ಗಗಳ ಪ್ರಭಾವವನ್ನೂ ವಾಸಂತಿಯವರ ಕೃತಿಗಳು ಪ್ರತಿಬಿಂಬಿಸುತ್ತವೆ. ಅವರ ಜಲವರ್ಣಚಿತ್ರಗಳು ಮಿಕ್ಕ ಪ್ರಕಾರಗಳಿಗಿಂತ ಹೆಚ್ಚು ಸಮರ್ಥವಾಗಿ ಪರಿಣಮಿಸಿವೆ. ಚಿತ್ರವಸ್ತುವಿನ ಕೌಶಲಪೂರ್ಣ ಯೋಜನೆ, ಉತ್ತಮ ವರ್ಣವಿನ್ಯಾಸ, ರೇಖಾಸೌಷ್ಠವ, ಅಚ್ಚುಕಟ್ಟು – ಇವು ಜಲವರ್ಣ ಚಿತ್ರಗಳಲ್ಲಿ ಎದ್ದು ಕಾಣುತ್ತವೆ. ✤



ಶ್ರೀಮತಿ ವಾಸಂತಿ ವೆಂಕಟೇಶ್



# ನಿಕೋಲಾಸ್ ರೋರಿಕ್ ಸ್ಮಾರಕ




ಕಲಾಸಾಮ್ರಾಜ್ಯ: ವರ್ಣಚಿತ್ರ ಸೃಷ್ಟಿಯಲ್ಲಿ ನಿರತರಾದ ಪುಟಾಣಿಗಳು


ಕಲಾಸಕ್ತಿಯೂ ಸೌಂದರ್ಯಾಭಿಜ್ಞತೆಯೂ ವಯಸ್ಸನ್ನು ಅವಲಂಬಿಸಿದವಲ್ಲವೆಂದೂ ನೂರಾರು ಮಂದಿ ಮಕ್ಕಳಲ್ಲಿ ಅವು ಸುಪ್ತವಾಗಿದ್ದು ಅವಕಾಶ ದೊರೆತಲ್ಲಿ ಮೊಳೆಯಲು ಉತ್ಸುಕವಾಗಿರುತ್ತವೆಂದೂ ಕಳೆದ ಫೆಬ್ರುವರಿ 22ರಂದು ಬೆಂಗಳೂರು ಲಾಲ್‌ಬಾಗಿನಲ್ಲಿ ನಡೆದ ಎಳೆಮಕ್ಕಳ ಚಿತ್ರಕಲಾಸ್ಪರ್ಧೆಯಲ್ಲಿ ಸ್ಥಿರಪಟ್ಟಿತು. ಅಂತರರಾಷ್ಟ್ರ ಖ್ಯಾತಿಯ ವರ್ಣಚಿತ್ರಕಾರರೂ ವಿಶ್ವಶಾಂತಿಗಾಗಿ ಶ್ರಮಿಸಿದವರೂ ಅಸೀಮ ಭಾರತಪ್ರೇಮಿಗಳೂ ಆಗಿದ್ದ ಪ್ರೊಫೆಸರ್ ನಿಕೋಲಾಸ್ ರೋರಿಕ್ ಅವರ ಜನ್ಮಶತಾಬ್ದಿಯ ಸ್ಮರಣಿಕೆಯಾಗಿ ಕರ್ನಾಟಕ ಚಿತ್ರಕಲಾಪರಿಷತ್ತು ಏರ್ಪಡಿಸಿದ್ದ ಈ ಕಲಾಸ್ಪರ್ಧೆಯಲ್ಲಿ 2,250ಕ್ಕೂ ಹೆಚ್ಚು ಸಂಖ್ಯೆಯ ಮಕ್ಕಳು ಭಾಗವಹಿಸಿದ್ದುದು ಅತ್ಯಂತ ಸಂತಸದಾಯಕ ಸಂಗತಿ. ಮೂರು ವರ್ಷದಿಂದ ಹದಿನಾರು ವರ್ಷದವರೆಗಿನ ವಿವಿಧ ವಯಸ್ಸುಗಳ ಮಕ್ಕಳು ತಮ್ಮ ಅಂತರಂಗ ಕಂಡ ಸೌಂದರ್ಯಕ್ಕೆ ಚಿತ್ರರೂಪದ ಅಭಿವ್ಯಕ್ತಿ ಕೊಡುವುದರಲ್ಲಿ ತಲ್ಲೀನರಾಗಿದ್ದ ದೃಶ್ಯ ನೋಡಿದವರ ಕಣ್ಣಿಗೆ ಹಬ್ಬ. ಸ್ಪರ್ಧಿಗಳ ಸಂಖ್ಯೆಯೇ ಎರಡು ಸಾವಿರಕ್ಕೆ ಮಿಗಿಲಾಗಿತ್ತು; ಸ್ಪರ್ಧಿಗಳ ತಂದೆತಾಯಿಯರೂ ಬಂಧುಗಳೂ ಸಾವಿರ ಗಟ್ಟಲೆ ಸಂಖ್ಯೆಯಲ್ಲಿ ದಟ್ಟಣಿಸಿ ಮಕ್ಕಳ ಕೌಶಲವನ್ನು ನೋಡಿ ಹರ್ಷಿಸಿದ್ದು ಸ್ವಾಭಾವಿಕ. ತಮ್ಮ ಜೀವನದಲ್ಲಿ ಇದೊಂದು ಮಹತ್ವದ ದಿನವೆಂಬ ಭಾವನೆ ಮಕ್ಕಳಿಗೆ, ಹಿರಿಯರಿಗೆ; ವ್ಯವಸ್ಥಾಪಕರಿಗೆ ಕೂಡ.

ಶ್ರೀಮತಿ ವಸುಂಧರಾದೇವಿ ಘೋರ್ಪಡೆಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕುಮಾರಿ ಅನೂರಾಧಾ ಘೋರ್ಪಡೆಯವರು ಸ್ಪರ್ಧೆಯನ್ನು ಉದ್ಘಾಟಿಸಿದರು. ಎಳೆವಯಸ್ಸಿನಲ್ಲಿಯೇ ಮಕ್ಕಳ ಕಲಾಭಿರುಚಿಯನ್ನು ಪೋಷಿಸುವುದರ ಅಗತ್ಯವನ್ನು ಡಾ॥ ಸ್ವೆಟೊಸ್ಲಾವ್ ರೋರಿಕ್‌ರವರು ಒತ್ತಿ ಹೇಳಿದರು; ಪ್ರೊಫೆಸರ್ ನಿಕೋಲಾಸ್ ರೋರಿಕ್‌ರವರ ಜೀವನದ ಲಘು ಪರಿಚಯವನ್ನೂ ಮಾಡಿಕೊಟ್ಟರು. ಡಾ॥ ಸ್ವೆಟೊಸ್ಲಾವ್ ರೋರಿಕ್‌ರವರು ತಮ್ಮ ತಂದೆಯ ಹೆಸರಿನಲ್ಲಿ ದಾನಮಾಡಿದ 120 ಬೆಳ್ಳಿಯ ಪಾರಿತೋಷಕಗಳನ್ನೂ ಶ್ರೀ ಎಚ್. ಕೆ. ಕೆಜರೀವಾಲ್‌ರವರು ದಾನಮಾಡಿದ ರೂ. 2,750 ಮೌಲ್ಯದ ಟ್ರೋಫಿಯನ್ನೂ ವಿತರಣೆಗಾಗಿ ಚಿತ್ರಕಲಾ

↓ 'ಕಾಲಕ್ಷೇಪ': ಬಹುಮಾನ ಪಡೆದ ಒಂದು ಚಿತ್ರ



↓ 'ನಾನು ಕಂಡ ಸರ್ಕಸ್': ಬಹುಮಾನಿತ ಚಿತ್ರ







↑ 'ವನವಿಹಾರಿಗಳು': ಬಹುಮಾನಿತ ಚಿತ್ರ




ಬಹುಮಾನ ಸ್ವೀಕರಿಸುತ್ತಿರುವ ಒಬ್ಬ ಮರಿಕಲಾವಿದೆ ↑

↓ ಬಹುಮಾನಿತ ಕಲಾವಿದರ ಗೋಷ್ಠಿ



# ಮರಿಕಲಾವಿದರ ಮೇಳ



ಪ್ರಶಸ್ತಿ ವಿತರಣಿ ಸಭೆಯಲ್ಲಿ ಭಾಷಣಮಾಡುತ್ತಿರುವ ಡಾ|| ಸ್ವೆಟೊಸ್ಲಾವ್ ರೋರಿಕ್ (ಚಿತ್ರದಲ್ಲಿರುವ ಇತರರು : ಶ್ರೀ ಲಕ್ಷ್ಮಣ ಮುಂಚಿಗೆಯ್ಯ, ಶ್ರೀ ಎಚ್. ಕೆ. ಕೆಜರೀವಾಲ್, ಶ್ರೀ ಜೆ. ವಿ. ಕೆ. ರಾವ್)

←

ಪರಿಷತ್ತಿನ ಪರವಾಗಿ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಸ್ವೀಕರಿಸಿದರು. ಬೇರೆ ಬೇರೆ ವಯಸ್ಸಿನ ವಿವಿಧ ವರ್ಗಗಳಲ್ಲಿ ಒಟ್ಟು 225 ಬಹುಮಾನಗಳನ್ನೂ ಆರು ವಿಶೇಷ ಬಹುಮಾನಗಳನ್ನೂ ನೀಡಲಾಯಿತು. ಬಹುಮಾನಗಳನ್ನು ಫೆಬ್ರುವರಿ 27ರಂದು ವೆಸ್ಟ್ ಎಂಡ್ ಹೋಟೆಲಿನಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿ ಶ್ರೀ ಜೆ. ವಿ. ಕೆ. ರಾವ್‌ರವರು ವಿತರಣೆ ಮಾಡಿದರು.

ಬಹುಮಾನ ಪಡೆದ ಕಲಾಕೃತಿಗಳನ್ನು ವೆಸ್ಟ್ ಎಂಡ್ ಹೋಟೆಲಿನಲ್ಲಿ ಪ್ರದರ್ಶಿಸಲಾಗಿತ್ತು.

ಉದ್ಘಾಟನ ಭಾಷಣದಲ್ಲಿ ಶ್ರೀಮತಿ ವಸುಂಧರಾದೇವಿ ಘೋರ್ಪಡೆಯವರು ಆಡಿದ ಈ ಮಾತುಗಳು ಸ್ಪರ್ಧೆಯನ್ನು ನೋಡಲು ಕಿಕ್ಕಿರಿದಿದ್ದ ಸಾವಿರಾರುಮಂದಿಯ ಮನಸ್ಸಿನ ಅನಿಸಿಕೆಯನ್ನು ಪ್ರತಿಬಿಂಬಿಸಿದವೆನ್ನಬಹುದು: "ಈ ಸ್ಪರ್ಧೆಗಳಲ್ಲಿ ಪಾಲ್ಗೊಂಡವರೆಲ್ಲ ಚಿತ್ರಕಲೆಯನ್ನೇ ವೃತ್ತಿಯಾಗಿ ಮಾಡಿಕೊಳ್ಳುತ್ತಾರೆಂದು ನಿರೀಕ್ಷಿಸಬೇಕಾಗಿಲ್ಲ. ಆದರೆ ಅವರು ಯಾವುದೇ ಜೀವನಕ್ಷೇತ್ರವನ್ನು ಹೊಕ್ಕರೂ ಅದನ್ನು ಶ್ರೀಮಂತವಾಗಿಸುತ್ತಾರೆಂದು ಧಾರಾಳವಾಗಿ ಹೇಳಬಹುದು. ವಿಜ್ಞಾನ, ಯಂತ್ರಯೋಜನೆ, ಆಡಳಿತ ಮುಂತಾದ ಯಾವುದೇ ಕ್ಷೇತ್ರವಾದರೂ ವ್ಯಕ್ತಿಯ ಸಾಂಸ್ಕೃತಿಕ ಮನೋವೃತ್ತಿಯಿಂದ ಸಂಪನ್ನವೂ ಸಾರ್ಥಕವೂ ಆಗುತ್ತದೆ." ✦

↓ ಮರಿಕಲಾವಿದರ ಒಂದು ತಂಡ



ಸುಧಾ, 2 ಮೇ 1976

# ಕಪಟ ನರಿ



ಬೀರಳ್ಳಿಯ ಮರಿಗೌಡನ ಬಳಿ ನೂರಾರು ಕುರಿಗಳಿದ್ದವು. ಗೌಡ ಪ್ರತಿದಿನವೂ ಅವುಗಳನ್ನು ಕಾಡಿಗಟ್ಟಿಕೊಂಡು ಹೋಗಿ ಮೇಯಿಸಿಕೊಂಡು ಬರುತ್ತಿದ್ದ. ಅದೇ ಕಾಡಿನಲ್ಲಿ ವಾಸವಾಗಿದ್ದ ಒಂದು ನರಿ, ದೂರದಿಂದಲೇ ಆ ಕುರಿಗಳ ಹಿಂಡನ್ನು ನೋಡಿ – "ಆಹಾ ! ಎಂತಹ ಕೊಬ್ಬಿದ ಕುರಿಗಳು ! ಹೇಗಾದರೂ ಮಾಡಿ ಆ ಕುರುಬನ ಕಣ್ಣು ತಪ್ಪಿಸಿ ಒಂದೇ ಒಂದು ಕುರಿಯನ್ನಾದರೂ ತಿನ್ನಬೇಕು" ಎಂದು ದಿನವೂ ಅಂದುಕೊಳ್ಳುತ್ತಿತ್ತು.

ಒಂದು ಬೇಸಿಗೆಯ ದಿನ ಅದರ ಆಸೆ ಫಲಿಸಿಯೇಬಿಟ್ಟಿತು. ಗೌಡನ ಕುರಿಗಳ ಪೈಕಿ, ಒಂದು ಕೊಬ್ಬಿದ ಕುರಿ ಹಿಂಡಿನಿಂದ ತಪ್ಪಿಸಿಕೊಂಡು ಕಾಡಿನಲ್ಲಿಯೇ ಉಳಿದುಬಿಟ್ಟಿತು. ಗೌಡ ಅದನ್ನು ಗಮನಿಸದೆ ಹೊರಟುಹೋದ. ಸುಳಿವನ್ನರಿತ ನರಿ ಆನಂದದಿಂದ ಕುರಿಯ ಬಳಿ ಬಂದು, ಅತಿವಿನಯದಿಂದ ಅದಕ್ಕೆ ವಂದಿಸಿ, ಮಾತಿಗಾರಂಭಿಸಿತು. ದಿಕ್ಕುತಪ್ಪಿ ಭಯದಿಂದ ಗಡಗಡನೆ ನಡುಗುತ್ತಿದ್ದ ಕುರಿಗೆ ನರಿ ನಾನಾ



ರೀತಿಯಲ್ಲಿ ಧೈರ್ಯ ತುಂಬಿ, ತನ್ನ ಮನೆಗೆ ಬರಬೇಕಾಗಿ ಒತ್ತಾಯಿಸಿತು.

ಬಾಯಾರಿಕೆಯಿಂದ ಬಳಲುತ್ತಿದ್ದ ಕುರಿ "ಮೊದಲು ನಾನು ನೀರು ಕುಡಿಯಬೇಕಾಗಿದೆ. ನೀರೆಲ್ಲಿದೆ ತೋರಿಸುವೆಯಾ?" ಎಂದು ಕೇಳಿತು.

"ಅದಕ್ಕೇನಂತೆ, ನಿನಗೆ ಸಾಕಾಗುವಷ್ಟು ನೀರು ಕುಡಿಸುತ್ತೇನೆ ಬಾ" ಎಂದು ಅದನ್ನು ಕಾಡಿನ ಸಮೀಪದಲ್ಲಿದ್ದ ಮತ್ತೊಂದು ಹಳ್ಳಿಗೆ ಕರೆದೊಯ್ದಿತು ನರಿ. ಕುರಿ ಹಿಂದೆ ಮುಂದೆ ಯೋಚಿಸದೆ ತಲೆ ತಗ್ಗಿಸಿಕೊಂಡು ನರಿಯನ್ನು ಹಿಂಬಾಲಿಸಿತು.

ಆ ಹಳ್ಳಿಯ ಹೊರಗಡೆ ಒಂದು ರಾಟೆಯ ಬಾವಿ ಇತ್ತು. ಬೇಸಿಗೆ ಕಾಲವಾದರಿಂದ ದಾರಿಹೋಕರಿಗೆ ಅನುಕೂಲವಾಗಲೆಂದು ಅಲ್ಲಿ ಒಂದು ಸೇದುವ ಹಗ್ಗ ಹಾಗೂ ಬಕೀಟನ್ನು ಇಟ್ಟಿದ್ದರು. ನರಿ ಕುರಿಗೆ ಅದನ್ನು ತೋರಿಸುತ್ತಾ "ನೀನು ಈ ಬಕೀಟಿನಲ್ಲಿ ಕುಳಿತುಕೊ. ನಾನು ಹಗ್ಗದ ಸಹಾಯದಿಂದ ಇದನ್ನು ಬಾವಿಯಲ್ಲಿ ಬಿಡುತ್ತೇನೆ. ನೀನು ಹೊಟ್ಟೆ ತುಂಬಾ ನೀರು ಕುಡಿದಾದ ನಂತರ ಮೇಲಕ್ಕೆಳೆದುಕೊಳ್ಳುತ್ತೇನೆ. ಆಗದಾ?" ಎಂದಿತು.

ತಾನೇ ಬಾವಿಯಲ್ಲಿ ಇಳಿಯುವ ಬದಲಾಗಿ ಬಕೀಟಿನಿಂದ ನೀರು ಸೇದಿ ಕುಡಿಯಬಹುದೆಂಬುದು ಕುರಿಗೆ ಹೊಳೆಯಲಿಲ್ಲ. ಅದು ನರಿಯ ಮಾತಿಗೆ ಸಮ್ಮತಿ ಸೂಚಿಸಿ, ತನ್ನ ದೊಡ್ಡದೇಹವನ್ನು ಸಾಕಷ್ಟು ಕುಗ್ಗಿಸಿ ಬಕೀಟಿನಲ್ಲಿ ಕುಳಿತುಕೊಂಡಿತು. ನರಿ ಅತ್ಯಂತ ಪ್ರಯಾಸದಿಂದ ಆ ಬಕೀಟನ್ನು ಬಾವಿಯ ಕಟ್ಟೆಯ ಮೇಲಿರಿಸಿ ದುಢಂನೆ ಅದನ್ನು ಬಾವಿಗೆ ನೂಕಿತು. ಅನಾಮತ್ತಾಗಿ ಬಾವಿಗೆ ಬಿದ್ದ ಕುರಿ ಉಸಿರು ಕಟ್ಟಿ ಪ್ರಾಣಬಿಟ್ಟಿತು.

ಕುರಿಯನ್ನೇನೋ ಸುಲಭದಲ್ಲಿಯೇ ಮುಗಿಸಿದ್ದಾಯಿತು. ಆದರೆ ಅದನ್ನು ಬಾವಿಯಿಂದ ಹೊರತೆಗೆಯಬೇಕಲ್ಲಾ? ನರಿ ಸುತ್ತಮುತ್ತ ಕಣ್ಣಾಡಿಸಿತು. ಬಾವಿಯ ಆಸು–ಪಾಸಿನಲ್ಲಿ ರೈತರು ಬೇಸಿಗೆ ಜೋಳದ ಕಣ ಮಾಡಿರುವುದು ಕಾಣಿಸಿತು. ಕೂಡಲೆ ಅದು ಸಮೀಪದ ಪೊದೆಯಲ್ಲಿ ಅಡಗಿಕೊಂಡು–

"ಅಣ್ಣಾ ಅಣ್ಣಾ ಓಡ್ಬರ್ರೋ
ಬಾವಿಯೊಳಗ ನೋಡ್ಬರ್ರೋ
ಹಗ್ಗ– ಪುಟ್ಟಿ ತಾಂಬರ್ರೋ
ಬಂದ್ರುಂಟು, ಬಧದಿದ್ರಿಲ್ಲಾ..."

ಎಂದು ಕೂಗಿಕೊಂಡಿತು. ನರಿಯ ಕೂಗುಕೇಳಿ ಕುತೂಹಲಗೊಂಡ ರೈತರು ಕಣದಿಂದ ಓಡಿಬಂದು ಬಾವಿಯಲ್ಲಿ ಹಣಕಿ ಹಾಕಿದರು. ಚಂದ್ರನ ಹಾಲಿನಂಥ ಬೆಳದಿಂಗಳಲ್ಲಿ, ಬಾವಿಯ ತಳದಲ್ಲಿದ್ದ ಸ್ವಲ್ಪವೇ ನೀರಿನಲ್ಲಿ ಕುರಿ ಬಿದ್ದಿರುವುದು ಅವರಿಗೆ ಸ್ಪಷ್ಟವಾಗಿ ಕಂಡಿತು. ಕೂಡಲೆ ಅವರು ಮನೆಯಿಂದ ದೊಡ್ಡ ಪುಟ್ಟಿ ತರಿಸಿ, ಅದರ ಸಹಾಯದಿಂದ ಕುರಿಯನ್ನು ಹೊರಕ್ಕೆ ತೆಗೆದರು.

ಹಣ ಖರ್ಚುಮಾಡದೆಯೇ ಭಾರಿ ಕುರಿಯೊಂದು ತಮಗೆ ದಕ್ಕಿತಲ್ಲಾ ! ಎಂದು ಸಂತೋಷಿಸುತ್ತಾ ಅವರು ಅದಕ್ಕೆ ಅಲ್ಲಿಯೇ ಚೂರಿ ಹಾಕಿದರು. ಹತ್ತಾರು ಜನಗಳೂ ಕೂಡಿ ಕ್ಷಣಾರ್ಧದಲ್ಲಿ ಅದರ ಮಾಂಸವನ್ನು ಹಲಸಿನಹಣ್ಣಿನ ತೊಳೆ ಬಿಡಿಸುವಂತೆ ಬಿಡಿಸಿಟ್ಟರು. ಇನ್ನೇನು, ಅವರು ತಲಾ ಇಷ್ಟಿಷ್ಟೆಂದು ಮಾಂಸವನ್ನು ಪಾಲು ಮಾಡಿಕೊಳ್ಳಬೇಕು ಎನ್ನುವಷ್ಟರಲ್ಲಿ ನರಿ ಅವರಿಗೆ ಕೆಲಸ ಕೊಟ್ಟಿತು.

ರೈತರು ಕುರಿಕೊಯ್ಯುವ ಸಡಗರದಲ್ಲಿದ್ದಾಗ ಅದು ಕಣದಬಳಿ ಹೋಗಿ, ರೈತನೊಬ್ಬ ಬೀಡಿಸೇದಲು ಇರಿಸಿಕೊಂಡಿದ್ದ ಬೆಂಕಿಪೊಟ್ಟಣದಿಂದ ಕಡ್ಡಿಗೀರಿ, ಜೋಳದ ಕಡ್ಡಿ ಒಟ್ಟಿದ್ದ ಬಣಮೆಗೆ ಬೆಂಕಿ ಇಟ್ಟಿತು. ನಂತರ–

"ಅಣ್ಣಾ ಅಣ್ಣಾ ಓಡ್ಬರ್ರೋ
ಬಣವೆ ಉರಿಯೋದು ನೋಡ್ಬರ್ರೋ
ಕೊಡ ಕೊಡ ನೀರು ತಾಂಬರ್ರೋ
ತಂದ್ರುಂಟು ತರದಿದ್ರಿಲ್ಲಾ..."

ಎಂದು ಕೂಗಿಕೊಂಡಿತು. ರೈತರು ಗಾಬರಿಯಿಂದ ಮಾಂಸವನ್ನು ಅಲ್ಲಿಯೇ ಬಿಟ್ಟು ತಮ್ಮ ತಮ್ಮ ಕಣದತ್ತ ಓಡಿದರು. ಬಾವಿಯಿಂದ ನೀರು ಸೇದಿ ಬೆಂಕಿ ಆರಿಸುವ ಯತ್ನದಲ್ಲಿ ಅವರು ತೊಡಗಿದಾಗ, ನರಿ ಮಾಂಸವನ್ನೆಲ್ಲಾ ಒಯ್ದು ಪೊದೆಯಲ್ಲಿಟ್ಟುಕೊಂಡು, ತಿಂದು ತೇಗಿ ಅಲ್ಲಿಂದ ಕಾಲ್ತೆಗೆಯಿತು.


ಬೆಂಕಿ ಆರಿಸಿದ ನಂತರ ಮಾಂಸದ ನೆನಪು ಮಾಡಿಕೊಂಡ ರೈತರು ಅಲ್ಲಿಗೆ ಬಂದು ನೋಡಿದಾಗ ಅವರಿಗೆ ಕಾಣಿಸಿದ್ದೇನು? – ನರಿ ತಿನ್ನಲಾಗದೆ ಬಿಟ್ಟುಹೋಗಿದ್ದ ಕೆಲವು ಮೂಳೆಯ ಚೂರುಗಳು ಮಾತ್ರ!

-ಬಿ.ಟಿ. ಲಲಿತಾ, ಸಿ. ನಾಯಕ್

ಭೂಮಿಯ ಮೇಲೆ ಇರುವುದು ದೇವತೆಗಳ ಲೋಕವೆಂದು ವೇದಕಾಲದ ಜನ ನಂಬಿದ್ದರು. ಮಳೆ ಬಂದರೆ ಅದು ಇಂದ್ರ ಅಥವಾ ವರುಣನ ಪ್ರಸಾದವೆನ್ನುತ್ತಿದ್ದರು.



## ಅದ್ಭುತ-ರಮ್ಯ




ಮುಗಿಲಿನಾಚೆ ಜಲಲೋಕವಿದೆಯೆಂದು ಪ್ರಾಚೀನ ಇಸ್ರೇಲಿನ ಜನ ನಂಬಿದ್ದರು: ಆಕಾಶದ ಕೆಲವು ಕಿಂಡಿಗಳಿಂದ ನೀರು ಸೋರಿದಾಗ ಮಳೆಯಾಗುವುದೆಂದು ಅವರೆಣಿಕೆ.



ಇದು ನಮ್ಮ ಗ್ರಹಮಂಡಲರಾಶಿ. ಸೂರ್ಯಾದಿ ಗ್ರಹಗಳ ಸ್ಥಾನವನ್ನು ಬಾಣದ ಗುರುತು ತೋರಿಸಿದೆ. ಭೂಮಿಯು ಸೂರ್ಯನ ಗ್ರಹವೆಂದು ಈಗ ತಿಳಿದಿದೆ. ಸೂರ್ಯನು ಆ ತೇಜೋರಾಶಿಯ ಒಂದು ಕಿರುತಾರೆ ಮಾತ್ರ. ಇಂಥ ಮುಗಿಲು * ತೇಜೋರಾಶಿಗಳು ಲಕ್ಷಾಂತರ ಇವೆ.

# ಬೆಳವಣಿಗೆಯ ಬಾಲ್ಯಕ್ಕೆ ಆರೋಗ್ಯಭಾಗ್ಯ- ಇನ್‌ಕ್ರಿಮಿನ್* ನಿಂದ




ಬಾಲ್ಯ ಕಾಲದ ಬೆಳವಣಿಗೆಯ ದಿನಗಳು ನಿಮ್ಮ ಮಗುವಿನ ಮಹತ್ವದ ದಿನಗಳು. ಈ ದಿನಗಳಲ್ಲಿ ಮಗುವಿಗೆ ಅವಶ್ಯವಾಗಿ ಇನ್‌ಕ್ರಿಮಿನ್ ಸಿರಪ್ ಕೊಡಿರಿ. ಆಗಿನ ಆಶ್ಚರ್ಯ ನೋಡಿರಿ! ತಿನಿಸಿನ ಬಗ್ಗೆ ಮಗುವಿನ ಕಿರಿಕಿರಿ ನಿಮಗೆ ಕೇಳಬರದು. ಬದಲಿಗೆ ಅದರ ಹಸಿವು ಕೆರಳುವದು. ಬೆಳವಣಿಗೆಯತ್ತ ಭರದಿಂದ ಸಾಗುವದು. ಇನ್‌ಕ್ರಿಮಿನ್‌ನಲ್ಲಿ ವಿಟಮಿನ್ ಹಾಗೂ ಕಬ್ಬಿಣದ ಉತ್ಕೃಷ್ಟ ಗುಣಗಳಿವೆ. ಇಷ್ಟೇ ಅಲ್ಲದೆ ವಿಶಿಷ್ಟ ಅಮಿನೋ ಆ್ಯಸಿಡ್, ಲೈಸಿನ್ ಕೂಡ ಇದೆ. ಇವೆಲ್ಲವೂ ಸೇರಿ ಆಹಾರದ ಪೋಷಕಾಂಶಗಳ ಪೂರ್ಣ ಪಚನಕ್ಕೆ ಸಹಾಯ ಮಾಡುತ್ತವೆ.




## ಇನ್‌ಕ್ರಿಮಿನ್*ಟಾನಿಕ್

ಡ್ರಾಪ್ಸ್ : 2 ತಿಂಗಳಿನಿಂದ 2 ವರ್ಷಗಳ ವರೆಗಿನ ಮಕ್ಕಳಿಗಾಗಿ·
ಸಿರಪ್ : 14 ವರ್ಷದ ವರೆಗಿನ ಮಕ್ಕಳಿಗಾಗಿ

## ಅಧಿಕ ಆಹಾರವನ್ನು ಅಧಿಕ ಬೆಳವಣಿಗೆಗೆ ಮಾರ್ಪಡಿಸುತ್ತದೆ

ಡಾಕ್ಟರುಗಳು ನಂಬುವ ಹೆಸರು— Lederle ಸಾಯನಾಮಿಡ್ ಇಂಡಿಯಾ ಲಿಮಿಟೆಡ್‌ರವರ ಒಂದು ವಿಭಾಗ
*ಅಮೇರಿಕನ್ ಸಾಯನಾಮಿಡ್ ಕಂಪೆನಿಯ ರಜಿಸ್ಟರ್ಡ್ ಟ್ರೇಡ್‌ಮಾರ್ಕ್

Sista's-INC-363H-R/76 Kan

Cover Printed by:
Modern Process Printers, Bangalore-560 010.

SUDHA Illustrated Kannada Weekly 2-5-1976 KRN-A-37



1976 ನೇ ವರ್ಷದ ಬಟ್ಟೆ!

DCM

ಹೊಸ ಷಿಫಾನ್ ಸೀರೆಗಳನ್ನು ಅರ್ಪಿಸುತ್ತದೆ

ACIL-DCM-183 KAN